ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಟಿಇಇ/03/ಇಸಿಎಸ್(1)/2025

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು-560001
ದಿನಾಂಕ: 02.04.2025

## ಜ್ಞಾಪನ

ವಿಷಯ: 2024-25ನೇ ಸಾಲಿನ ಡಿಪ್ಲೋಮ ಸೆಮಿಸ್ಟರ್ ಏಪ್ರಿಲ್/ಮೇ 2025ರ ಪರೀಕ್ಷೆಗೆ ಸಂಬಂಧಿಸಿದಂತೆ ಆಂತರಿಕ ಅಂಕಗಳನ್ನು ಪರಿಶೀಲಿಸಲು ಪರಿವೀಕ್ಷಕರು ಸಂಸ್ಥೆಗೆ ಭೇಟಿ ನೀಡುವ ಮುನ್ನ ಪೂರ್ವಭಾವಿಯಾಗಿ ಪ್ರಾಂಶುಪಾಲರು ಅನುಸರಿಸಬೇಕಾದ ಕ್ರಮಗಳ ಕುರಿತು.

ಉಲ್ಲೇಖ: 1) ತಾಂತ್ರಿಕ ಪರೀಕ್ಷಾ ಮಂಡಳಿಯ 153ನೇ ಕೇಂದ್ರೀಯ ಸಭೆಯ ನಿರ್ಣಯ 153.2.11
2) ಸರ್ಕಾರಿ ಆದೇಶ ಸಂಖ್ಯೆ:ಇಡಿ 57 ಟಿಪಿಇ 2013 ದಿನಾಂಕ:17.4.2015
3)ಈ ಕಛೇರಿ ಸುತ್ತೋಲೆ ಸಂಖ್ಯೆ:DTE-ADMI0ACM2/45/2024 Dt:01.04.2025

* * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2024-25ನೇ ಶೈಕ್ಷಣಿಕ ಸಾಲಿನ ಏಪ್ರಿಲ್/ಮೇ 2025ರ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಗೆ ಸಂಬಂಧಿಸಿದಂತೆ ತಾಂತ್ರಿಕ ಪರೀಕ್ಷಾ ಮಂಡಳಿಯಿಂದ ಆಂತರಿಕ ಅಂಕಗಳನ್ನು ಹಾಗೂ ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಲು "ಆಂತರಿಕ ಅಂಕಗಳ ಪರಿವೀಕ್ಷಕರು" ಗಳನ್ನು ನೇಮಿಸಲಾಗುವುದು.

**ಆಂತರಿಕ ಅಂಕಗಳ ಪರಿವೀಕ್ಷಕರು ಸಂಸ್ಥೆಗೆ ಭೇಟಿ ನೀಡುವ ಮೊದಲು, ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲು ಸಂಸ್ಥೆಗಳ ಪ್ರಿನ್ಸಿಪಾಲರುಗಳಿಗೆ ಸೂಚಿಸಲಾಗಿದೆ.**

1. ಏಪ್ರಿಲ್/ಮೇ 2025ರ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಗೆ ನೋಂದಾಯಿಸಿರುವ ವಿದ್ಯಾರ್ಥಿಗಳ ಅರ್ಜಿ ಮತ್ತು ಶುಲ್ಕ ಪಾವತಿಸಿರುವ ಬಗ್ಗೆ ವಿವರಗಳನ್ನು ಪರಿಶೀಲಿಸಿ ಅದರಂತೆ ಕ್ಯಾಂಡಿಡೇಟ್ ಲಿಸ್ಟ್ ಅನ್ನು BTELinx ಪೋರ್ಟಲ್ ನಲ್ಲಿ ಇಂದೀಕರಿಸಿರುವುದನ್ನು ಖಾತರಿ ಪಡಿಸಿಕೊಳ್ಳುವುದು.

2. ಲ್ಯಾಟರಲ್ ಎಂಟ್ರಿ ಮುಖಾಂತರ ಪ್ರವೇಶ ಪಡೆದ ವಿದ್ಯಾರ್ಥಿಗಳು ಏಪ್ರಿಲ್/ಮೇ 2025ರ ಪರೀಕ್ಷೆಗೆ ನೋಂದಾಯಿಸಿದ್ದಲ್ಲಿ ಸದರಿ ವಿದ್ಯಾರ್ಥಿಗಳ ಐಟಿಐ ಟ್ರೇಡ್ & ಡಿಪ್ಲೋಮ ಪ್ರೋಗ್ರಾಮ್‌ಗಳಿಗೆ ಅನುಗುಣವಾಗಿ ನಿಯಮಾನುಸಾರ ಆಯ್ಕೆ ಮಾಡಬೇಕಾದ ಸಬ್ಜೆಕ್ಟ್ ಡಿಕ್ಷನರಿ/ X Bridge Subject/s Dictionary ಯನ್ನು BTELinx ಪೋರ್ಟಲ್ ನಲ್ಲಿ ಸಮರ್ಪಕವಾಗಿ ಇಂದೀಕರಿಸಿರುವುದನ್ನು ಖಾತರಿ ಪಡಿಸಿಕೊಳ್ಳುವುದು.

3. ಸ್ಕೀಂ ಆಫ್ ಸ್ಟಡೀಸ್‌ಗಳಿಗೆ ಅನುಗುಣವಾಗಿ ಮೂಲ ಆಂತರಿಕ ಅಂಕಗಳ ವಹಿಯಲ್ಲಿ ವಿವಿಧ ಕಿರುಪರೀಕ್ಷೆಗಳು/ ಪಠ್ಯ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಗಳಿಸಿರುವ ಅಂಕಗಳನ್ನು BlueBooks/Recordsಗಳಲ್ಲಿ ಮೌಲ್ಯಮಾಪನವಾಗಿರುವಂತೆ ಮೂಲ ಆಂತರಿಕ ಅಂಕಗಳ ವಹಿಯಲ್ಲಿ ನಮೂದಿಸಿರುವುದನ್ನು ಖಾತರಿಪಡಿಸಿಕೊಳ್ಳುವುದು.

4. ವಿದ್ಯಾರ್ಥಿಗಳ ಹಾಜರಾತಿ ತೃಪ್ತಿಕರವಾಗಿ ಇರುವುದನ್ನು ಖಾತರಿಪಡಿಸಿಕೊಳ್ಳುವುದು. ವಿದ್ಯಾರ್ಥಿಯ Attendance Shortage ಬಗ್ಗೆ 2, 4 & 6 ಮತ್ತು 1, 3 & 5 ನೇ ಸೆಮಿಸ್ಟರ್ (ಪಾರ್ಟ್ ಟೈಮ್) ಪೂರ್ಣ ವಿಷಯಗಳ ಪರೀಕ್ಷೆಗೆ ಹಾಜರಾಗುತ್ತಿದ್ದಲ್ಲಿ, ವಿದ್ಯಾರ್ಥಿಗಳ ಹಾಜರಾತಿಯನ್ನು ಕಡ್ಡಾಯವಾಗಿ ಪರಿಶೀಲಿಸತಕ್ಕದ್ದು. ಹಾಜರಾತಿ ಕಡಿಮೆ ಇರುವಂತಹ ವಿದ್ಯಾರ್ಥಿಗಳು ಏಪ್ರಿಲ್/ಮೇ 2025ರ ಸೆಮಿಸ್ಟರ್ ಪರೀಕ್ಷೆಗೆ ಹಾಜರಾಗಲು ಅವಕಾಶವಿರುವುದಿಲ್ಲ, ಅದರಂತೆ BTELinx ಪೋರ್ಟಲ್ ನಲ್ಲಿ ಇಂದೀಕರಿಸಿರುವುದನ್ನು ಖಾತರಿಪಡಿಸಿಕೊಳ್ಳುವುದು.

ಪ್ರೋಗ್ರಾಮ್ :

ಶೈಕ್ಷಣಿಕ ವರ್ಷ:2024-25

| ಸೆಮಿಸ್ಟರ್ | ರೆಗ್ಯುಲರ್ ವಿದ್ಯಾರ್ಥಿಗಳ ಸಂಖ್ಯೆ (ಹಾಜರಾತಿ ವಹಿಯಂತೆ) | ಹಾಜರಾತಿ ಕೊರತೆ ಇರುವ ವಿದ್ಯಾರ್ಥಿಗಳ ಸಂಖ್ಯೆ | ಪರೀಕ್ಷಾ ಶುಲ್ಕ ಪಾವತಿಸದ ವಿದ್ಯಾರ್ಥಿಗಳ ಸಂಖ್ಯೆ |
|---|---|---|---|
| 2ನೇ | | | |
| 4ನೇ | | | |
| 6ನೇ | | | |

5. C-20 ಪಠ್ಯಕ್ರಮದಲ್ಲಿ ಹಾಜರಾತಿ ಕೊರತೆಯಿಂದ ಪರೀಕ್ಷೆ ಬರೆಯಲು ಅರ್ಹತೆ ಪಡೆದಿಲ್ಲದ ವಿದ್ಯಾರ್ಥಿಗಳಿಗೆ ಮಾತ್ರ ಮರು ಪ್ರವೇಶ (Repeater Admission) ನೀಡಲು ಅವಕಾಶವಿರುತ್ತದೆ. ಆದುದರಿಂದ ಯಾವುದೇ ತರಗತಿಯಲ್ಲಿ ಮರುಪ್ರವೇಶ (Repeater Admission) ಪಡೆದ ವಿದ್ಯಾರ್ಥಿಗಳಿದ್ದಲ್ಲಿ ಹಿಂದಿನ ಸಾಲಿನಲ್ಲಿ ಅದೇ ತರಗತಿಯಲ್ಲಿ Attendance Shortage ಇರುವ ವಿದ್ಯಾರ್ಥಿಗಳಿಗೆ

Scanned with OKEN Scanner

ಮಾತ್ರ ಸಿ-20 ರೆಗ್ಯುಲೇಷನ್ ಅನುಸಾರ ಮರು ಪ್ರವೇಶ (Repeater Admission) ನೀಡಿರುವುದನ್ನು ಮತ್ತು ಆಯುಕ್ತಾಲಯದಿಂದ ಅನುಮೋದಿಸಲ್ಪಟ್ಟಿರುವುದನ್ನು ಖಾತರಿಪಡಿಸಿಕೊಳ್ಳುವುದು.

ಪ್ರೋಗ್ರಾಮ್ : ಶೈಕ್ಷಣಿಕ ವರ್ಷ:2024-25

| ಸೆಮಿಸ್ಟರ್ | ರಿಪೀಟರ್ ವಿದ್ಯಾರ್ಥಿಗಳ ಹೆಸರುಗಳು (ಹಾಜರಾತಿ ವಹಿಯಂತೆ) | ಆಯುಕ್ತಾಲಯದ ಪ್ರವೇಶಾನುಮೋದನೆ ಪತ್ರ ಸಂಖ್ಯೆ | ರಿಪೀಟರ್ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ (ಸೆಮಿಸ್ಟರ್‌ವಾರು) |
|---|---|---|---|
| 2ನೇ | | | |
| 4ನೇ | | | |
| 6ನೇ | | | |

6. ಹಿಂದಿನ ತರಗತಿಗಳಲ್ಲಿನ ಮಾಲ್‌ಪ್ರಾಕ್ಟೀಸ್ ಪ್ರಕರಣಗಳಲ್ಲಿ ವಿದ್ಯಾರ್ಥಿಗಳಿಗೆ (ಮಂಡಳಿಯ ಮಾಲ್‌ಪ್ರಾಕ್ಟೀಸ್ ಶಿಕ್ಷೆಯ ಆದೇಶಗಳಂತೆ) ವಿಧಿಸಲ್ಪಟ್ಟ ಶಿಕ್ಷೆ/ಗಳ ಬಗ್ಗೆ ಸಂಸ್ಥೆಗಳಲ್ಲಿ ನಿರ್ವಹಿಸುತ್ತಿರುವ **ಮಾಲ್‌ಪ್ರಾಕ್ಟೀಸ್ ಪ್ರಕರಣಗಳ ರಿಜಿಸ್ಟರ್** ಅನ್ನು ಪರಿಶೀಲಿಸುವುದು. ನವೆಂಬರ್/ಡಿಸೆಂಬರ್ 2024 ರ ಸೆಮಿಸ್ಟರ್ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು 1, 3 & 5 ನೇ ಸೆಮಿಸ್ಟರ್ / 2, 4 & 6ನೇ ಸೆಮಿಸ್ಟರ್ (ಪಾರ್ಟ್ ಟೈಮ್) ಪೂರ್ಣ ವಿಷಯಗಳ ಪರೀಕ್ಷೆಗೆ ಹಾಜರಾಗಿ ಮಾಲ್‌ಪ್ರಾಕ್ಟೀಸ್ ಪ್ರಕರಣಕ್ಕೆ ಒಳಗಾಗಿ PEC (Performance of Exam Cancelled) ಎಂದು ಶಿಕ್ಷೆ ವಿಧಿಸಿದಲ್ಲಿ ಮುಂದಿನ Higher Semester ಗೆ ಪ್ರವೇಶ ಪಡೆಯಲು ಅರ್ಹರಿರುವುದಿಲ್ಲದಂತಹ ಪ್ರಕರಣಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ತಿಳಿಸಲಾಗಿದೆ.

7. C-20 ಪಠ್ಯಕ್ರಮದ ರೆಗ್ಯುಲೇಷನ್‌ನಂತೆ ವಿದ್ಯಾರ್ಥಿಯು ಯಾವುದೇ ಪಠ್ಯ/ಪ್ರಾಯೋಗಿಕ ವಿಷಯದಲ್ಲಿ ಶೇ.40ಕ್ಕಿಂತ ಕಡಿಮೆ ಆಂತರಿಕ ಅಂಕಗಳನ್ನು (CIE) ಗಳಿಸಿದ್ದಲ್ಲಿ ಅಂತಹ ವಿಷಯ/ಗಳಲ್ಲಿ ಸೆಮಿಸ್ಟರ್‌ನ ಅಂತಿಮ ಪರೀಕ್ಷೆ (SEE) ಬರೆಯಲು ಅರ್ಹತೆ ಇರುವುದಿಲ್ಲ. ಆದ್ದರಿಂದ ಅಂತಹ ವಿದ್ಯಾರ್ಥಿಗಳ (NE) ವಿವರಗಳನ್ನು ವಿಷಯವಾರು ಪಟ್ಟಿ ಮಾಡಿ, ಯಾವ ವಿಷಯ/ಗಳಲ್ಲಿ ಏಪ್ರಿಲ್/ಮೇ 2025ರ ಸೆಮಿಸ್ಟರ್‌ನ ಅಂತಿಮ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಅರ್ಹರಿರುವುದಿಲ್ಲ ಎಂಬುದನ್ನು ಸೆಮಿಸ್ಟರ್‌ವಾರು ಆಂತರಿಕ ಅಂಕಗಳ ವಹಿಯ ಕೊನೆಯ ಪುಟದಲ್ಲಿ ನಮೂದಿಸುವುದು ಮತ್ತು ಸಂಬಂಧಪಟ್ಟ ಉಪನ್ಯಾಸಕರುಗಳು, ವಿಭಾಗಾಧಿಕಾರಿಗಳು & ಪ್ರಿನ್ಸಿಪಾಲರುಗಳು ದೃಢೀಕರಿಸುವುದು.

ಪ್ರೋಗ್ರಾಮ್ : ಶೈಕ್ಷಣಿಕ ವರ್ಷ:2024-25

ಸೆಮಿಸ್ಟರ್: ಪಠ್ಯ/ಪ್ರಾಯೋಗಿಕ ವಿಷಯ & ಕೋಡ್:

| ಕ್ರ.ಸಂ. | NE ವಿದ್ಯಾರ್ಥಿಗಳ ಹೆಸರು | ಆಂತರಿಕ ಅಂಕಗಳು | |
|---|---|---|---|
| | | ಗರಿಷ್ಠ | ಪಡೆದಿರುವ ಅಂಕಗಳು(<40% only) |
| | | | |
| | | | |

8. ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಪೂರ್ಣ ಪರೀಕ್ಷೆಯ ಸಬ್ಜೆಕ್ಟ್ ಡಿಕ್ಷನರಿ/ X /Bridge Subject/s Dictionary ಯನ್ವಯ ಮತ್ತು ಹಿಂದಿನ ಸೆಮಿಸ್ಟರ್‌ಗಳ ಬಾಕಿ ಇರುವ ವಿಷಯಗಳಿಗೆ ನಿಯಮಾನುಸಾರ ಅನ್ವಯವಾಗುವ ಪರೀಕ್ಷಾ ಶುಲ್ಕ/ಗಳನ್ನು ಕಡ್ಡಾಯವಾಗಿ ಪಾವತಿಸಿರುವ ಕುರಿತು ಖಾತರಿಪಡಿಸಿಕೊಳ್ಳುವುದು. ಪರೀಕ್ಷಾ ಶುಲ್ಕ ಪಾವತಿಸಿಲ್ಲದ ರೆಗ್ಯುಲರ್ ವಿದ್ಯಾರ್ಥಿಗಳ ಪಟ್ಟಿ ಮಾಡುವುದು ಮತ್ತು BTELinx ಪೋರ್ಟಲ್ ನಲ್ಲಿ ಇಂದೀಕರಿಸುವುದು.

ಪ್ರೋಗ್ರಾಮ್ : ಶೈಕ್ಷಣಿಕ ವರ್ಷ:2024-25

ಸೆಮಿಸ್ಟರ್: ಪಠ್ಯ/ಪ್ರಾಯೋಗಿಕ ವಿಷಯ & ಕೋಡ್:

| ಕ್ರ.ಸಂ. | ಹಾಜರಾತಿ ಕೊರತೆ ಇರುವ ವಿದ್ಯಾರ್ಥಿಗಳ ಹೆಸರು | ಹಾಜರಾತಿ | |
|---|---|---|---|
| | | ಒಟ್ಟು ತರಗತಿಗಳು | ಹಾಜರಾದ ತರಗತಿ |
| | | | |
| | | | |
| | | | |

9. ಯಾವುದೇ ವಿದ್ಯಾರ್ಥಿಯು 3ನೇ ಸೆಮಿಸ್ಟರ್‌ನಲ್ಲಿ ಕೋರ್ಸ್ ಬದಲಾವಣೆ ಹೊಂದಿದ್ದಲ್ಲಿ (Change of Branch/Program) ಅಂತಹ ವಿದ್ಯಾರ್ಥಿಗಳು ನಿಯಮಾನುಸಾರ ತೆಗೆದುಕೊಳ್ಳಬೇಕಾದ ಬ್ರಿಡ್ಜ್ ಸಬ್ಜೆಕ್ಟ್ ಡಿಕ್ಷನರಿಯನ್ನು ಇಂದೀಕರಿಸುವುದು ಹಾಗೂ ಸಂಬಂಧಪಟ್ಟ ಎಲ್ಲಾ ಬ್ರಿಡ್ಜ್ ಕೋರ್ಸ್‌ಗಳನ್ನು ಇಂದೀಕರಿಸಿರುವುದನ್ನು ಖಾತರಿಪಡಿಸಿಕೊಳ್ಳುವುದು.

Scanned with OKEN Scanner

10. ಬೇರೊಂದು ಸಂಸ್ಥೆಯಿಂದ ತಮ್ಮ ಸಂಸ್ಥೆಗೆ 3 / 5ನೇ ಸೆಮಿಸ್ಟರ್‌ನಲ್ಲಿ ವರ್ಗಾವಣೆ ಹೊಂದಿ ಪ್ರವೇಶ ಪಡೆದಿರುವ ವಿದ್ಯಾರ್ಥಿ/ಗಳ ಹೆಸರು ಆಯುಕ್ತಾಲಯದಿಂದ ಅನುಮೋದನೆಗೊಂಡಿರುವ ಬಗ್ಗೆ ಖಾತರಿ ಪಡಿಸಿಕೊಳ್ಳುವುದು ಮತ್ತು ಅಂತಹ ವಿದ್ಯಾರ್ಥಿಗಳು **Change of Branch/Program** ಹೊಂದಲು ಅವಕಾಶವಿರುವುದಿಲ್ಲ ಎಂಬುದನ್ನು ಗಮನಿಸುವುದು.

ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಗಣಿಸಿ ಮೂಲ ಆಂತರಿಕ ಅಂಕಗಳ ವಹಿಯಲ್ಲಿ ಆಂತರಿಕ ಅಂಕಗಳನ್ನು ಸಂಬಂಧಪಟ್ಟ ವಿಭಾಗಾಧಿಕಾರಿಗಳು ಹಾಗೂ ಪ್ರಿನ್ಸಿಪಾಲರು ಕೂಲಂಕಷವಾಗಿ ಪರಿಶೀಲಿಸಿ ಪ್ರತಿ ಪುಟಗಳಲ್ಲಿಯೂ ದೃಢೀಕರಿಸಿ ಮೊಹರಿನೊಂದಿಗೆ ಸಹಿ ಮಾಡುವುದು.

ಮೇಲಿನಂತೆ ಪರಿಶೀಲನೆ ನಂತರ ಆಂತರಿಕ ಅಂಕಗಳನ್ನು ಅಪ್‌ಲೋಡ್ ಮಾಡುವ ಸಲುವಾಗಿ Subject Dictionary ಮತ್ತು Candidate List ಗಳಿಗನುಗುಣವಾಗಿ BTELinx ಪೋರ್ಟಲ್ ನಲ್ಲಿ ನೀಡಿರುವ IA Format ಅನ್ನು Excel ನಲ್ಲಿ Download ಮಾಡಿ ಆಂತರಿಕ ಅಂಕಗಳನ್ನು ನಮೂದಿಸಿ ಪಟ್ಟಿಯನ್ನು ತಯಾರಿಸಿ ಯಥಾವತ್ತಾಗಿ ಅದರ ಒಂದು ಪ್ರತಿಯಲ್ಲಿ ಹಾಗೂ ಮೂಲ ಆಂತರಿಕ ಅಂಕಗಳ ವಹಿಯಲ್ಲಿ ವಿದ್ಯಾರ್ಥಿಗಳ ಸಹಿ ಪಡೆಯುವುದು ಹಾಗೂ ಸದರಿ ಪಟ್ಟಿಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸುವುದು.

**ಪ್ರಾಂಶುಪಾಲರು ಪರಿಶೀಲಿಸಿ ದೃಢೀಕರಿಸಿದ ಮತ್ತು ವಿದ್ಯಾರ್ಥಿಗಳು ಸಹಮತಿಸಿದ ಆಂತರಿಕ ಅಂಕಗಳನ್ನು ನಂತರ BTELinx ಪೋರ್ಟಲ್ ನಲ್ಲಿ ಮಂಡಳಿಯು ಕಾಲಕಾಲಕ್ಕೆ ನೀಡುವ ಸೂಚನೆಗಳನ್ವಯ HOD/ PPL Login ನಲ್ಲಿ ಅಪ್‌ಲೋಡ್ ಮಾಡುವುದು. ತದನಂತರ BTELinx ಪೋರ್ಟಲ್ ನಿಂದ ಡೌನ್ ಲೋಡ್ ಮಾಡಿದ ಆಂತರಿಕ ಅಂಕಗಳ ಮುದ್ರಿತ ಪ್ರತಿ ಮತ್ತು ಮೂಲ ಆಂತರಿಕ ಅಂಕಗಳ ವಹಿ ಹಾಗೂ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಸಂಸ್ಥೆಗೆ ಭೇಟಿ ನೀಡುವ ಆಂತರಿಕ ಅಂಕಗಳ ಪರಿವೀಕ್ಷಕರಿಗೆ ನೀಡುವುದು.**

**ಆಂತರಿಕ ಅಂಕಗಳ ಪರಿವೀಕ್ಷಕರು:**

- ಮೂಲ ಆಂತರಿಕ ಅಂಕಗಳ ವಹಿಯಲ್ಲಿನ ಅಂಕಗಳನ್ನು ಸಂಬಂಧಪಟ್ಟ BlueBooks/Records/ಇತರೆ ದಾಖಲೆಗಳೊಂದಿಗೆ ಕೂಲಂಕಷವಾಗಿ ಪರಿಶೀಲಿಸಿ ದೃಢೀಕರಿಸುವುದು.
- ತದನಂತರ ವಹಿಯಲ್ಲಿನ ದೃಢೀಕೃತ ಆಂತರಿಕ ಅಂಕಗಳನ್ನು BTELinx ಪೋರ್ಟಲ್ ನಿಂದ ಡೌನ್ ಲೋಡ್ ಮಾಡಿದ ಮುದ್ರಿತ ಪ್ರತಿಯಲ್ಲಿನ ಅಂಕಗಳೊಂದಿಗೆ ಪರಿಶೀಲಿಸಿ . ಮುದ್ರಿತ ಪ್ರತಿಯಲ್ಲಿ ವ್ಯತ್ಯಾಸ ಇದ್ದಲ್ಲಿ ನಿಯಮಾನುಸಾರ ಕ್ರಮವಹಿಸುವುದು.
- ಮುಂದುವರೆದು BTELinx ಪೋರ್ಟಲ್ Online ನಲ್ಲಿ ಆಂತರಿಕ ಅಂಕಗಳನ್ನು ಮೂಲ ಆಂತರಿಕ ವಹಿಯಲ್ಲಿನ ದೃಢೀಕೃತ ಅಂಕಗಳೊಂದಿಗೆ ಕೂಡ ಪರಿಶೀಲಿಸುವುದು.

ಮೇಲ್ಕಂಡ ಎಲ್ಲಾ ಅಂಶಗಳ ಕುರಿತು ಕ್ರಮವಹಿಸಲು ಮತ್ತು ಈ ವಿಷಯದಲ್ಲಿ ಯಾವುದೇ ಗೊಂದಲ/ಲೋಪದೋಷಗಳು ಉಂಟಾಗದಂತೆ ಕ್ರಮವಹಿಸಲು ಎಲ್ಲಾ ಪ್ರಿನ್ಸಿಪಾಲರುಗಳಿಗೆ ಸೂಚಿಸಲಾಗಿದೆ. ಇದರಿಂದಾಗುವ ಯಾವುದೇ ಲೋಪ/ ವಿದ್ಯಾರ್ಥಿಗಳಿಗೆ ಉಂಟಾಗುವ ಅನಾನುಕೂಲಗಳಿಗೆ/ಕಾನೂನಾತ್ಮಕ ಸಮಸ್ಯೆಗಳಿಗೆ ಸಂಬಂಧಪಟ್ಟ ಪ್ರಿನ್ಸಿಪಾಲರುಗಳನ್ನೇ ನೇರ ಹೊಣೆಗಾರರನ್ನಾಗಿಸಲಾಗುವುದು.

**ವಿಶೇಷ ಸೂಚನೆ: ಆಂತರಿಕ ಅಂಕಗಳನ್ನು ಕಡ್ಡಾಯವಾಗಿ BTELinx ವೆಬ್‌ಪೋರ್ಟಲ್ ಮೂಲಕ ಅಪ್‌ಲೋಡ್ ಮಾಡಿದ ನಂತರ ಪ್ರವೇಶ ಪತ್ರಗಳನ್ನು ಮುದ್ರಿಸುವುದು.**

| ಕ್ರ. ಸಂ. | ಸೆಮಿಸ್ಟರ್ | ಆಂತರಿಕ ಅಂಕಗಳನ್ನು ಅಪ್‌ಲೋಡ್ ಮಾಡಲಾದ ವಿದ್ಯಾರ್ಥಿಗಳ ಸಂಖ್ಯೆ | | | | ಅಪ್‌ಲೋಡ್ ಮಾಡಲಾದ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ |
|---|---|---|---|---|---|---|
| | | ರೆಗ್ಯುಲರ್ ವಿದ್ಯಾರ್ಥಿಗಳು | ಲ್ಯಾಟರಲ್ ಎಂಟ್ರಿ | NE ವಿದ್ಯಾರ್ಥಿಗಳು | ಪರೀಕ್ಷಾ ಶುಲ್ಕ ಪಾವತಿಸದ ವಿದ್ಯಾರ್ಥಿಗಳು | |
| | | | | | | |
| | | | | | | |

ಕಾರ್ಯದರ್ಶಿ

ಇವರಿಗೆ,

1.ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪ್ರಾಂಶುಪಾಲರುಗಳಿಗೆ.-ಅಗತ್ಯ ಕ್ರಮಕ್ಕಾಗಿ
2.ಆಂತರಿಕ ಅಂಕಗಳ ಪರಿವೀಕ್ಷಕರುಗಳಿಗೆ- ಸಂಬಂಧಪಟ್ಟ ಪ್ರಿನ್ಸಿಪಾಲರುಗಳ ಮುಖಾಂತರ

ಪ್ರತಿ: 1. ಕಂಪ್ಯೂಟರ್ ವಿಭಾಗ – ಬಿಟಿಇ ಲಿಂಕ್ಸ್ ವೆಬ್‌ಪೋರ್ಟಲ್‌ನಲ್ಲಿ ಪ್ರಕಟಿಸಲು
2. ಇ-ಗವರ್ನೆನ್ಸ್ ವಿಭಾಗ –ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
3. ಕಾರ್ಯದರ್ಶಿಯವರ ಆಪ್ತಶಾಖೆ 4. ಪರೀಕ್ಷಾ ವಿಭಾಗದ ಅಧಿಕಾರಿಗಳು/ ಸಿಬ್ಬಂದಿಯವರಿಗೆ 5. ಇಎಪಿ ವಿಭಾಗ

Scanned with OKEN Scanner